(ಇಂದು ದಿನಾಂಕಃ 28-09-2020 ರಂದು ತೆರೆದ ನ್ಯಾಯಾಲಯಕ್ಕೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಸಾಕ್ಷಿಯು ಸಾಕ್ಷ್ಯ ಕಕ್ಷೆಗೆ ಬರುವ ಪೂರ್ವದಲ್ಲಿ ವೈದ್ಯಾಧಿಕಾರಿಗಳು ಸಾರ್ವಜನಿಕ ಆಸ್ಪತ್ರೆ ನವಲಗುಂದ ಇವರಿಂದ ಕೋವಿಡ್-19 ಪರೀಕ್ಷಾ ವರದಿ ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತಾರೆ. ವರದಿ ಪರಿಶೀಲಿಸಿ ಸಾಕ್ಷ್ಯ ನುಡಿಯಲು ಅನುಮತಿ ನೀಡಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ ಃ ಶ್ರೀ** ಜಿ ಎಚ್ ಬಿ **ವಕೀಲರಿಂದ.**

ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯವನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲ ಸಂಗತಿಗಳು ನಿಜ ಇರುತ್ತವೆ.

ನನಗೆ ವಾದಿ ನಂಃ 1 ಮತ್ತು 3 ಇವರು ಸಾಕ್ಷ್ಯ ನುಡಿಯಲು ವಿಶೇಷ ಮುಖ್ತಿಯಾರ ಪತ್ರ ಬರೆದುಕೊಟ್ಟಿದ್ದು ಅದರ ಮೂಲ ಪ್ರತಿಯನ್ನು ಹಾಜರಪಡಿಸಿರುತ್ತೇನೆ ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು. ದಿನಾಂಕಃ 25.04.1973 ರ ಖರೀದಿ ಪತ್ರದ ದೃಡೀಕೃತ ನಕಲನ್ನು ಹಾಜರಪಡಿಸಿರುತ್ತೇನೆ ಅದನ್ನು ನಿ.ಪಿ.2 ಎಂದು ಗುರುತಿಸಲಾಯಿತು. ಡ ನಂಃ 567, 973, 858, 1728, 1603, 1229, 1128, 1332, 1517, 1333, 1725, ಇವುಗಳ ದೃಡೀಕೃತ ನಕಲುಗಳನ್ನುಹಾಜರಪಡಿಸಿರುತ್ತೇನೆ ಅದನ್ನು ನಿ.ಪಿ.3 ರಿಂದ 14 ಎಂದು ಗುರುತಿಸಲಾಯಿತು. ರಿ.ಸ. ನಂಃ 78 ರ ಸನ್-1967 ರಿಂದ 1974 ರವರೆಗಿನ ಕೈ ಬರಹ ಉತಾರೆಯನ್ನು ಹಾಜರಪಡಿಸಿರುತ್ತೇನೆ ಅದನ್ನು ನಿ.ಪಿ.15 ಎಂದು ಗುರುತಿಸಲಾಯಿತು. ರಿ.ಸ. ನಂಃ 70 ರ ಸನ್-1974 ರಿಂದ 2001 ರವರೆಗಿನ ಉತಾರೆಗಳನ್ನು ಹಾಜರಪಡಿಸಿರುತ್ತೇನೆ ಅದನ್ನು ನಿ.ಪಿ.16 ರಿಂದ 19 ಎಂದು ಗುರುತಿಸಲಾಯಿತು. ರಿ.ಸ. ನಂಃ 70 ರ ಪಹಣಿಯನ್ನು ಹಾಜರಪಡಿಸಿರುತ್ತೇನೆ ಅದನ್ನು ನಿ.ಪಿ.20 ಎಂದು ಗುರುತಿಸಲಾಯಿತು. ಆದ್ದರಿಂದ ನಾನು ಕೋರಲಾದಂತೆ ದಾವೆಯನ್ನು ಡಿಕ್ರಿ ಮಾಡಲು ಪ್ರಾರ್ಥಿಸಿಕೊಳ್ಳುತ್ತೇನೆ.

***ಪಾಟೀ ಸವಾಲು ಃ- ಶ್ರೀ ಸಿ ಬಿ ಕೆ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲಿಗೆ ಮುದ್ದತ್ ನೀಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ. ಇದೆ.

(ಸುನೀಲ ಎಸ್ ತಳವಾರ)
ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.
ನವಲಗುಂದ.